the Government be pleased to take over the administration ?

Sri A. G. RAMACHANDRA RAO.—It is a hypothetical question. When it comes up it will be considered.

Sri A. BHEEMAPPA NAIK.—Are there not sufficient Municipal High Schools and private schools taken over by Government and managed now ?

Sri A. G. RAMACHANDRA RAO.—I want notice for that.

Sri A. BHEEMAPPA NAIK.—Will the Government set up a Committee to consider this question threadbare and come to an understanding since these municipalities are feeling it very difficult to manage the high schools; will the Government consider this aspect of setting up a committee and examining the question threadbare ?

Sri A. G. RAMACHANDRA RAO.—Yes, we will consider.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಮುನಿಸಿಪಾಲಿಟಿಗಳು ಹೈಸ್ಕೂಲುಗಳನ್ನು ನಡೆಸುವ ಶಕ್ತಿಯಿಲ್ಲದೆ ಇದ್ದರೆ ಏನುಮಾಡುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಉತ್ತರ ಹೇಳಿ ಆಯಿತು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಹೈಸ್ಕೂಲುಗಳಲ್ಲಿ ಒಂದೇ ವರ್ಷ ಫೇಲ್ ಆಗಿದ್ದವರೂ, ಹಾಗೆ ಒಂದು ಸಲ ಫೇಲ್ ಆಗಿದ್ದಾರೆಂಬ ಕಾರಣದಮೇಲೆ ಅವರನ್ನು ಸ್ಕೂಲಿಗೆ ಸೇರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಆ ರೀತಿ 60-80 ಜನರನ್ನು ಸೇರಿಸದೇ ಇರುವುದನ್ನು ತಮ್ಮಗಮನಕ್ಕೆ ತಂದರೆ ಈ ತೊಂದರೆಯನ್ನು ಪರಿಹರಿಸುತ್ತಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೇಕಾಯಿತೆಂದು ವಿಚಾರಮಾಡುತ್ತೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಸ್ಕೂಲನ್ನಲ್ಲಿ ಸ್ಥಳಸಾಲದೆಂದು ಹೇಳಿ ಹಾಗೆಮಾಡಿದ್ದರೆ ಸರಿಪಡಿಸುತ್ತೀರಾ!

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಬಿ.ಎಸ್.ಸಿ. ಟೆಕ್ಸ್‌ಟೈಲ್ಸ್ ಎಂಬ ಪರೀಕ್ಷೆಯಲ್ಲಿ 29 ಜನ, 30 ಜನ ತೇರ್ಗಡೆಯಾಗಿದ್ದಾರೆಂದು ಇಲ್ಲಿ ಕೊಟ್ಟಿದ್ದೀರಿ. ಇಷ್ಟು ಜನ ತೇರ್ಗಡೆಯಾಗಿರುವವರಲ್ಲಿ ಸರ್ಕಾರದವರು ಒಬ್ಬರಿಗಾದರೂ ಕೆಲಸ ಕೊಟ್ಟಿದ್ದಾರೆಯೇ ?

Sri A. G. RAMACHANDRA RAO.—He is going back to the previous question.

ಶ್ರೀ ಜಿ. ಬಸಪ್ಪ.—ಅನೇಕ ಮುನಿಸಿಪಲ್ ಹೈಸ್ಕೂಲುಗಳಲ್ಲಿ ಅಲ್ಲಿನ ನೌಕರರಿಗೆ ಎರಡು ಮೂರು ತಿಂಗಳಾದರೂ ಸಂಬಳಗಳು ದೊರೆಯುತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಅಧ್ಯಕ್ಷರು.—ಅದೆಲ್ಲ ಚರ್ಚೆಯಾಗಿದೆ. You all took about twenty minutes for discussing this subject on another occasion.

Grant of lands for cultivation in Hosadurga Taluk

Q.—133. Sri G. BASAPPA (Hosadurga).—

Will the Government be pleased to state :—

(*a*) the extent of Excise, Amrit Mahal, Forest, hullubanni kharab lands available for disposal in Hosadurga Taluk from 1947;

(*b*) the extent of land disposed of in each of these lands from 1947 to 1953 every year;

(*c*) the number of *dharkhast* applications received in each year from 1947 to 1953 for the grant of these lands and how many of them are sanctioned, rejected and pending?

A.—Sri KADIDAL MANJAPPA (Minister for Revenue and Public Works).—

(*a*)—

Sl. No.	*Kind*	*Extent* A.	g.
1	Excise kharab	3,757	15
2	Amrit Mahal	87 (1947)	10
3	Forest	No land has been surrendered from forests.	
4	Hullubanni kharab	38,198	29

(SRI KADIDAL MANJAPPA.)

(b)— A.M. Kaval Forest Hullubanni Kharab

Sl. No.	Year	Excise A.	g.	A.	g.		A.	g.
1	1947 ..	32	6	..		..	61	11
2	1948 ..	82	16	..		..	17	10
3	1949 ..	94	33	..		..	68	16
4	1950 ..	68	26	..		..	155	17
5	1951 ..	201	35	25	0	..	350	3
6	1952-53 ..	162	1	..		..	187	5
	Total ..	641	37	25	0	..	839	22

(c)—

Sl. No.	Year	No. of applications received	No. sanctioned	No. rejected	Pending
1	1947-48	197	81	55	61
2	1948-49	306	141	107	58
3	1949-50	279	111	89	79
4	1950-51	348	163	50	135
5	1951-52	300	132	52	116
6	1952-53	318	148	100	70

ಶ್ರೀ ಜಿ. ಬಸಪ್ಪ.—1947-48ರಲ್ಲಿ 81 ಜನರಿಗೆ ದರಖಾಸ್ತು ಮೇಲೆ ಜಮೀನು ಕೊಟ್ಟಿದ್ದೀರಿ, ಒಬ್ಬೊಬ್ಬರಿಗೆ ಎಷ್ಟೆಷ್ಟು ಕೊಟ್ಟಿದ್ದೀರಿ ?

*ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜಿ. ಬಸಪ್ಪ.—(ಬಿ) ಭಾಗದ ಉತ್ತರದಲ್ಲಿ 1947ರಲ್ಲಿ 32 ಎಕರೆ 6 ಗುಂಟೆ, 61 ಎಕರೆ 11 ಗುಂಟೆ ಎಂದಿದೆ: ಒಟ್ಟು 81 ಜನರಿಗೆ ಕೊಟ್ಟಿದೆ. ಇದನ್ನು ಲೆಕ್ಕ ಹಾಕಿದರೆ ಪ್ರತಿಯೊಬ್ಬರಿಗೂ ಎಷ್ಟಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಜಿ. ಬಸಪ್ಪ.—Arithmetical Calculation ಪ್ರಕಾರ ಒಬ್ಬೊಬ್ಬರಿಗೆ ಒಂದೆಕರೆ ಆರುಗುಂಟೆ ಬರುತ್ತದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ Arithmetical Calculation ಪ್ರಕಾರ ಕೊಟ್ಟಿದೆ ಎಂಬುದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಜಿ. ಬಸಪ್ಪ.—1948-49ರಲ್ಲಿ 141 ಅರ್ಜಿದಾರರಿಗೆ 82 ಎಕರೆ 16 ಗುಂಟೆ ಕೊಟ್ಟಿದ್ದೀರಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಉತ್ತರದಲ್ಲೇ ಇದೆ.

ಶ್ರೀ ಜಿ. ಬಸಪ್ಪ.—ಒಬ್ಬೊಬ್ಬರಿಗೆ ಒಂದೆಕರೆಗಿಂತ ಕಡಮೆ ಕೊಟ್ಟಿದ್ದೀರೆಂದು ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೇಳುವುದಕ್ಕಾಗುವುದಿಲ್ಲ, ಕೆಲವರಿಗೆ ಜಾಸ್ತಿ ಕೊಟ್ಟಿರಬಹುದು, ಕೆಲವರಿಗೆ ಕಡಮೆ ಕೊಟ್ಟಿರಬಹುದು.

ಅಧ್ಯಕ್ಷರು.—ಕೆಲವರಿಗೆ ಅರ್ಧ ಎಕರೆ ಮತ್ತೆ ಕೆಲವರಿಗೆ ಐದೆಕರೆ ಕೊಟ್ಟಿರಬಹುದು.

ಶ್ರೀ ಜಿ. ಬಸಪ್ಪ.—ಆರು ವರ್ಷಗಳಲ್ಲಿ 776 ಜನರಿಗೆ, ಎಂದರೆ, ಅರ್ಜಿದಾರರಿಗೆ, ಒಂದೂವರೆ ಸಾವಿರ ಎಕರೆ ಮಾತ್ರ ಮಂಜೂರು ಮಾಡಿರುವುದಕ್ಕೆ ಕಾರಣ ವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಾಯಶಃ ಇರತಕ್ಕ ಜಮೀನಿಗೆ ಅರ್ಜಿಗಳು ಬರದೇಯಿರಬಹುದು.

ಶ್ರೀ ಜಿ. ಬಸಪ್ಪ.—ಹಾಗಾದರೆ 1948ರಿಂದ 1953ರ ವರೆಗೆ ಇಷ್ಟೊಂದು ಅರ್ಜಿಗಳು ತೀರ್ಮಾನವಾಗದೆ ಪೆಂಡಿಂಗ್ ಆಗಿವೆ; ಇವರಿಗೆಲ್ಲಾ ಕೊಡುತ್ತೀರಾ ?

Sri KADIDAL MANJAPPA.—They are pending in various offices.

ಶ್ರೀ ಜಿ. ಬಸಪ್ಪ.—ಆರು ವರ್ಷಕ್ಕಿಂತ ಹೆಚ್ಚುಕಾಲ ಎಷ್ಟು ಪೆಂಡಿಂಗ್ ಆಗಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಜಾಗ್ರತೆ ತೀರ್ಮಾನಮಾಡಬೇಕೆಂದು ಆಜ್ಞೆ ಮಾಡಿದೆ.

ಶ್ರೀ ಜಿ. ದುಗ್ಗಪ್ಪ.—1947 ರಿಂದ ಎಕ್ಸ್ಟೆಜು, ಅಮೃತಮಹಲ್, ಫಾರೆಸ್ಟ್ ಮುಂತಾದ ಜಮೀನುಗಳನ್ನು ತೆಗೆದುಕೊಂಡಿದ್ದೀರಿ; ಇದನ್ನೆಲ್ಲಾ ವ್ಯವಸಾಯಕ್ಕೆ ಜನರಿಗೆ ಕೊಡುತ್ತೀರಾ, ಕೊಡಲು ಸಿದ್ಧವಾಗಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸಿದ್ಧವಾಗಿದ್ದೇವೆ.

*Asterisk indicates that the remarks or speeches have not been revised by the Member concerned.